ಉಪಾಧ್ಯಕ್ಷರು :— ಇದಕ್ಕೆ ಯಾವ ಮಂತ್ರಿಗಳು ಉತ್ತರಿಸುವವರು..

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಸರ್ಕಾರ ಇಲ್ಲ. ಅಲ್ಲಿ ಯಾರಾದರೂ ಇದ್ದಾರಾ ನೋಡಿ. ನಿಯಮ ಇಲ್ಲ, ನೀತಿ ಇಲ್ಲ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಒಬ್ಬರು ಕೇಳಿ ಉತ್ತರವನ್ನು ಕೊಡುವುದು ಬೇಡವೇ?

ಶ್ರೀ ಕುಂಬ್ಳೆ ಸುಂದರರಾವ್ :— ಮಾನ್ಯ ಉಪಾಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಈಗ ಅದು ಶೂನ್ಯವಾಗಿ ಹೋಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಇದು ಏನು ಸಭೆಯೇ? ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿ ಎಷ್ಟು ಹೊತ್ತು ಆಯಿತು. ಇಲ್ಲಿ ಜವಾಬ್ದಾರಿ ಬೇಡವೆ?

ಶ್ರೀಕುಂಬ್ಳೆ ಸುಂದರರಾವ್ :— ಮಾನ್ಯ ಉಪಾಧ್ಯಕ್ಷರೆ, ನಾನು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅದು ಶೂನ್ಯವಾಗಬಾರದು ಮಾನ್ಯವಾಗಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :— ನೋಟೀಸ್ ಬರುವುದು ಬಿಡುವುದು ನಮಗೆ ಗೊತ್ತಿಲ್ಲ. ಮಾನ್ಯ ಸದಸ್ಯರ ಸಮಸ್ಯೆಯನ್ನು ಕೇಳಿದ ಮೇಲೆ ನೀವು ರಿಪ್ಲೈ ಮಾಡುವುದಿಲ್ಲವೆಂದರೆ ಹೇಗೆ? ಮಾನ್ಯ ಕುಂಬ್ಳೆಸುಂದರರಾವ್‌ರವರೆ ಮಾನ್ಯ ಉಪಾಧ್ಯಕ್ಷರು ನಿಮಗೆ ಮಾತನಾಡಲು ಅವಕಾಶವನ್ನು ಕೊಟ್ಟಮೇಲೆ ನೀವು ಏಕೆ . ನೋಟೀಸ್ ಕೊಡುತ್ತಿರಾ? ನಾವು ಅವರಿಗೆ ನೋಟೀಸ್ ಕೊಡುವುದಕ್ಕೆ ಅಲ್ಲ ಇರುವುದು.

ಶ್ರೀ ಹೆಚ್. ಜಿ. ಗೋವಿಂದೇಗೌಡ :— ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಯಾವ ಮಂತ್ರಿ ಉತ್ತರಿಸಬೇಕೆಂದು ಹೇಳಿದರೆ ನಾವು ಇದ್ದೇವೆ, ನಾವು ಉತ್ತರ ಹೇಳುತ್ತೇವೆ. ಯಾರು ಮಂತ್ರಿಗಳು ಎಂದು ಅಡ್ರೆಸ್ ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :— ನಾವು ಕೇಳುವಂಥಾದ್ದು ಸರ್ಕಾರದ ಪರವಾಗಿ ಒಬ್ಬರು ಯಾರಾದರೂ ಮಂತ್ರಿಗಳು ಹೇಳಬೇಕು, ಯಾರು ಹೇಳುವುದಿಲ್ಲವೆಂದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ನಿಸರ್ಗಧಾಮಕ್ಕೆ ಸಂಬಂಧಪಟ್ಟ ಹಾಗೆ ಅರಣ್ಯ ಇಲಾಖೆಯವರು ಪ್ರೇಕ್ಷಣೀಯ ಸ್ಥಳ ಮಾಡಬೇಕೆನ್ನುವ ಕಾರಣಕ್ಕಾಗಿ ನೀವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಇದು ಒಂದು ನಿಸರ್ಗಧಾಮವಾಗಿ ಪರಿವರ್ತನೆಯಾಗಬೇಕೆನ್ನುವ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ಮಾನ್ಯ ಅರಣ್ಯ ಸಚಿವರು ಸಭೆಯಲ್ಲಿದ್ದಾರೆ. ತಾವು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಸರ್ಕಾರ ಇದನ್ನು ಪರಿಶೀಲನೆ ಮಾಡಿ ಸೂಕ್ತವಾದಂತಹ ಕ್ರಮವನ್ನು ಕೈಗೊಳ್ಳುತ್ತದೆ.

(೪) ರಾಜ್ಯದಲ್ಲಿ ಲಿಕ್ಕರ್ ಮಾರುವುದರ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಲಿಕ್ಕರ್ ಮಾರುವಂಥಾದ್ದಕ್ಕೆ ಮೂರು ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದ್ದಾರೆ.

(1) ಲಿಕ್ಕರ್ ಶಾಪ್ (2) ಬಾರ್ (3) ಬಾರ್ ಅಂಡ್ ರೆಸ್ಟೋರೆಂಟ್ ಎಂದು ಮಾಡಿದ್ದಾರೆ. ಲಿಕ್ಕರ್ ಶಾಪನ್ನು ರಾತ್ರಿ ಒಂಭತ್ತು ಗಂಟೆಗೆ ಕುಡಿಯುವುದನ್ನು ನಿಷೇಧ ಮಾಡುತ್ತಾರೆಂದು ರಾಜ್ಯ ಸರ್ಕಾರದವರು ಏನಾದರೂ ತೀರ್ಮಾನವನ್ನು ತೆಗೆದುಕೊಂಡರೆ ನಮ್ಮದು ಏನು ತಕರಾರು ಇಲ್ಲ. ಆದರೆ ಲಿಕ್ಕರ್ ಶಾಪ್ ಅನ್ನು 9 ಗಂಟೆಗೆ ಮುಚ್ಚಬೇಕು, ಬಾರ್ ಅಂಡ್ ರೆಸ್ಟೋರೆಂಟ್ ರಾತ್ರಿ 11 ಗಂಟೆಯವರೆಗೆ ತೆಗೆಯಬೇಕೆಂದು ಹೇಳುತ್ತಾರೆ. ಲಿಕ್ಕರ್ ಶಾಪ್‌ನವರು ಇಷ್ಟೆ ಪ್ರಮಾಣದ ಮದ್ಯವನ್ನು ಮಾರಬೇಕೆಂದು ಆದೇಶವನ್ನು ಕೊಡುತ್ತಾರೆ. ಹೀಗಾಗಿ ಇಡೀ ರಾಜ್ಯದಲ್ಲಿ ಲಿಕ್ಕರ್ ಶಾಪ್‌ಗಳ ಮಾಲಿಕರಿಗೆ ಪೊಲೀಸ್‌ನವರಿಂದ ಭಾರೀ ಕಿರಿಕಿರಿ ಪ್ರಾರಂಭವಾಗಿದೆ. ಜೊತೆಗೆ ಎಕ್ಸೈಜ್ ಅಧಿಕಾರಿಗಳ ಕಿರಿಕಿರಿ ಪ್ರಾರಂಭಮಾಡಿದ್ದಾರೆ. ಬಾರ್‌ಗಳು ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ನಡೆಯಬಹುದು. ಲಿಕ್ಕರ್ ಶಾಪ್‌ಗಳು ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ನಡೆಸಬೇಕೆಂಬ ನಿಯಮವೇನು ಇದೆ. ಆದನ್ನು ತಾವು ತಿದ್ದುಪಡಿ ಮಾಡುತ್ತೀರಾ? ನೀವು ಕುಡಿಯುವವರಿಗೆ ರಾತ್ರಿ 11 ಗಂಟೆಯವರೆಗೆ ಬಿಟ್ಟಮೇಲೆ ಲಿಕ್ಕರ್‌ನಲ್ಲಿ ಕೊಂಡು ಹೋಗಿ ಕುಡಿಯುವಂಥಾದ್ದರಲ್ಲಿ ಏನು ಅಪರಾಧವೆಂದು ನಾವು ಭಾವಿಸುವುದಿಲ್ಲ. ಕುಡಿಯುವುದು ತಪ್ಪು, ಅವನು ಬಾರ್‌ನಲ್ಲಿ ತೆಗೆದುಕೊಂಡು ಹೋಗಿ ಕುಡಿಯುತ್ತಾನೋ, ಶಾಪ್‌ನಲ್ಲಿ ಕುಡಿಯುತ್ತಾನೋ ಆ ಒಂದು ನಿಬಂಧನೆ ಏನು ಇದೆ ಅದನ್ನು ತಾವು ಹಿಂದಕ್ಕೆ ತೆಗೆದುಕೊಂಡು ರಾಜ್ಯದಲ್ಲಿರತಕ್ಕಂಥ ಲಿಕ್ಕರ್ ಶಾಪ್‌ಗಳನ್ನು ಅದರಲ್ಲೂ ನಮ್ಮ ತುಮಕೂರು ಜಿಲ್ಲೆಯಲ್ಲಿ ಭಾರೀ ತೊಂದರೆಯಾಗಿದೆ. ನಮ್ಮ ಅಧಿಕಾರಿಗಳು ಬೇಟೆಯಾಡುತ್ತಿದ್ದಾರೆ. ಇವರು ಲಿಕ್ಕರ್ ಶಾಪ್‌ಗಳನ್ನು ಹುಡುಕಿಕೊಂಡು ಹೋಗುವುದು ಅವರಿಗೆ 9 ಗಂಟೆಯ ಮೇಲೆ ಏಕೆ ಶಾಪ್ ತೆಗೆದಿದ್ದೆ, 10 ಗಂಟೆಯ ಮೇಲೆ ಏಕೆ ತೆಗೆದಿದ್ದೆ, ಎಂದು ಕೇಳುವುದು, ಈ ರೀತಿಯಾಗಿ ನಡೆಯುತ್ತಿದೆ ಆದುದರಿಂದ ನಾನು ಕೇಳುವುದೇನೆಂದರೆ ಬಾರ್‌ನವರು ಎಷ್ಟು ಹೊತ್ತು ಲಿಕ್ಕರ್ ಸಪ್ಲೈ ಮಾಡುತ್ತಾರೆ ಅಲ್ಲಿಯವರೆಗೆ ಈ ಲಿಕ್ಕರ್ ಶಾಪ್‌ಗಳನ್ನು ತೆಗೆಯುವಂಥಾದ್ದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ 10 ಗಂಟೆಯವರೆಗೆ ಆದರೂ ಅವರು ಲಿಕ್ಕರ್ ಮಾರುವಂಥಾದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

11.20 ಎ.ಎಂ.

ಶ್ರೀ ಎಸ್. ಜಯವಂತ್ (ಅಬಕಾರಿ ಸಚಿವರು) :— ಸನ್ಮಾನ್ಯ ಉಪಾಧ್ಯಕ್ಷರೆ, ಶ್ರೀಯುತ ಮಾಧುಸ್ವಾಮಿಯವರು ಸದನದಲ್ಲಿ ಈ ಒಂದು ವೇಳ-ಪಟ್ಟಿಯ ಬಗ್ಗೆ ಎತ್ತಿದಂಥ ವಿಚಾರದ ನಾನು ಸರ್ಕಾರದ ಈ ವರದಿಯನ್ನು ಒಪ್ಪಿಸುವುದಕ್ಕೆ ಇಚ್ಛಿಪಡುತ್ತೇನೆ. ಅಬಕಾರಿ ಆಯುಕ್ತರ ಅಧಿಸೂಚನೆ ಸಂ: ಇಸಿಎಸ್ 49 ಎಲ್‌ಇಜಿ 90, ದಿನಾಂಕ : 9-6-94ರಂದು ವೈನ್‌ಶಾಪ್ಸ್ ಸಿಎಲ್ 2 ಇವುಗಳ ವ್ಯಾಪಾರದ ವೇಳೆಯನ್ನು ಬೆಳಿಗ್ಗೆ 9.00 ಗಂಟೆಯಿಂದ ರಾತ್ರಿ 9.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಅಬಕಾರಿ ಆಯುಕ್ತರ ಅಧಿಸೂಚನೆ ಸಂಖ್ಯೆ : ಇಸಿಎಸ್ 49: ಎಲ್‌ಇಜಿ 90, ದಿನಾಂಕ : 18-1-93ರಂತೆ ಸಿಎಲ್ 9, ಬಾರ್ ಅಂಡ್ ರೆಸ್ಟೋರೆಂಟ್ಸ್‌ಗಳ ವ್ಯಾಪಾರದ ವೇಳೆಯನ್ನು ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ ಎರಡೂವರೆವರೆಗೆ ಹಾಗೂ ಸಂಜೆ 5.30ರಿಂದ 11.00 ಗಂಟೆಯವರೆಗೆ

ನಿಗದಿಪಡಿಸಲಾಗಿದೆ. ವೈನ್‌ಶಾಪ್‌ಗಳಲ್ಲಿ ಮದ್ಯವನ್ನು ಸೊಹರಾದ ಬಾಟಲ್‌ಗಳಲ್ಲಿ ಮಾತ್ರ ಮಾರಾಟ ಮಾಡಲು ಅವಕಾಶವಿದೆ. ಬಾರ್‌ಗಳಲ್ಲಿ ಊಟದ ಜೊತೆಗೆ ಮದ್ಯಸೇವನೆಗೂ ಕೂಡ ಅವಕಾಶವಿರುತ್ತದೆ. ವಿವಿಧ ಸನ್ನದುಗಳ ವ್ಯಾಪಾರದ ವೇಳೆಯನ್ನು ಅವುಗಳ ಅಗತ್ಯ ಮತ್ತು ವೈವಿಧ್ಯತೆಗೆ ತಕ್ಕಂತೆ ನಿಗದಿಪಡಿಸುವ ಅಧಿಕಾರವನ್ನು ಅಬಕಾರಿ ಆಯುಕ್ತರ ನಿಯಮ 4 ಕರ್ನಾಟಕ ಅಬಕಾರಿ ನಿಯಮ 98ರಲ್ಲಿ ಹೊಂದಿರುತ್ತಾರೆ. ಸನ್ಮಾನ್ಯ ಸದಸ್ಯರು ಕೊಟ್ಟಂಥ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಈ ವೇಳಾಪಟ್ಟಿಯಲ್ಲಿ ಏನಾದರೂ ಬದಲಾವಣೆ ಮಾಡುವುದಿದ್ದರೆ ನಾವು ಗಮನಹರಿಸುತ್ತೇವೆ ಎನ್ನುವ ವಿಷಯವನ್ನು ತಮ್ಮ ಮೂಲಕ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೆ, ಚರ್ಚೆಗೆ ಅವಕಾಶವಿಲ್ಲವೆನ್ನುವುದು ನನಗೂ ಗೊತ್ತು. ನಾನು ಹೇಳಿದ್ದನ್ನೇ ಸಚಿವರು ಹೇಳುವುದಾದರೆ ವಿಷಯವನ್ನು ನಾನು ಏತಕ್ಕೆ ಎತ್ತಬೇಕು? ನಾನೇ ಹೇಳಿದ 9.00 ಗಂಟೆಯಿಂದ 9.00 ಗಂಟೆಯವರೆಗೆ ಕೊಟ್ಟಿದ್ದೀರಿ. ಅವಕಾಶವಿಲ್ಲವೆನ್ನುವುದು ಗೊತ್ತು, ನನಗೆ ನಿಯಮ ಗೊತ್ತಿದೆ. ಆದರೆ ಉತ್ತರವನ್ನಾದರೂ ಅವರು ಸಮರ್ಪಕವಾಗಿ ಕೊಡಬೇಕಲ್ಲವೇ? ಕುಡಿಯುವುದನ್ನೇ 9.00 ಗಂಟೆಗೆ ನಿಲ್ಲಿಸಿ ನಾವು ತಯಾರಿದ್ದೇವೆ, ಅಥವಾ ಇಲ್ಲವೆಂದರೆ 10.30 ಗಂಟೆಗೊ ಅಥವಾ 11.00 ಗಂಟೆಗೊ ಮುಚ್ಚುವುದಕ್ಕೆ ಒಂದು ಅವಕಾಶ ಕೊಡುತ್ತೇವೆಂದು ತಾವು ಹೇಳಬೇಕಾಗುತ್ತದೆ.

ಶ್ರೀ ಎಸ್. ಜಯವಂತ :— ಉಪಾಧ್ಯಕ್ಷರೆ, ನಾನು ಕೂಡ ಈಗಾಗಲೇ ಸದಸ್ಯರ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿವಸಗಳಲ್ಲಿ ಮಾರ್ಪಾಡು ಮಾಡುವ ಅವಕಾಶ ಸಿಕ್ಕಾಗ ಗಮನಹರಿಸುತ್ತೇನೆ ಎನ್ನುವ ವಿಚಾರವನ್ನು ಹೇಳಿದ್ದೇನೆ.

(ಈ) ಹೊನ್ನಾವರ ಪಟ್ಟಣ ಪಂಚಾಯಿತಿಯಿಂದ ಗೋಕರ್ಣಪತ್ತೆಗಾಳಿಮಠಕ್ಕೆ ಭೂಮಿ ನೀಡುವ ಬಗ್ಗೆ.

ಡಾ: ಎಂ.ಪಿ. ಕರ್ಕಿ (ಕುಮ್ಟ) :— ಸನ್ಮಾನ್ಯ ಉಪಾಧ್ಯಕ್ಷರೆ, ಹೊನ್ನಾವರ ಪಟ್ಟಣ ಪಂಚಾಯಿತಿಯ ಸುಮಾರು [illegible] ಹಿಂದೆ 35 ಗುಂಟೆ ಪ್ರದೇಶವನ್ನು ಕಂಪೋಸ್ಟ್ ತಯಾರಿಕೆ ಎಂದು ಗೋಕರ್ಣ ಪತ್ತೆಗಾಳಿಮಠ ದೇವಸ್ಥಾನದಿಂದ ಭೂಸ್ವಾಧೀನಪಡಿಸಿಕೊಂಡರು. ಈ ಕಂಪೋಸ್ಟ್ ಕಾರ್ಯಕ್ರಮದ ಕಾರಣವಾದ್ದರಿಂದ ಜನಸ್ಪಾನಕ್ಕೆ ತರಲಾಗಲಿಲ್ಲ. ಈಗ ಈ ಸ್ಥಳವನ್ನು ಹೊನ್ನಾವರ ಪಟ್ಟಣಪಂಚಾಯಿತಿ ಗೋಕರ್ಣ ಪತ್ತೆಗಾಳಿಮಠ ದೇವಸ್ಥಾನಕ್ಕೆ ಹಿಂತಿರುಗಿಸಬೇಕೆಂಬ ಅನುಚಿತ ಒತ್ತಡ ಸರ್ಕಾರದಿಂದ ಬರುತ್ತಿದೆ. ಭೂ ಸ್ವಾಧೀನಪಡಿಸಿಕೊಂಡಾಗ ಈ ಸ್ಥಳ ರೈತರಸ್ಥಳವಾಗಿತ್ತು. ದೇವಸ್ಥಾನದ ಒಡೆತನದಲ್ಲಿ ಮುಂದುವರಿದರೆ ಭೂ ಸುಧಾರಣೆ ಕಾನೂನಿನ ಅನ್ವಯ ಇದು ರೈತರಿಗೇ ಸೇರುತ್ತಿತ್ತು. ಹಾಗಾಗಿ ಪತ್ತೆಗಾಳಿಮಠದವರು ಇದನ್ನು ತಮಗೆ ಹಿಂತಿರುಗಿಸಬೇಕೆಂದು ಹೇಳುವುದು ನ್ಯಾಯಸಮ್ಮತವಲ್ಲ. ಮೇಲೆ ಹೇಳಿದ 35 ಗುಂಟೆ ಸ್ಥಳಬಿಟ್ಟು ಪಟ್ಟಣಪಂಚಾಯಿತಿಯ ವಶದಲ್ಲಿ ಒಂದು ಸೆ.ಮಿ. ಜಾಗಕೂಡ ಇಲ್ಲ. ಹೊನ್ನಾವರ ಪಟ್ಟಣಪಂಚಾಯಿತಿಯ ವ್ಯಾಪ್ತಿಯಲ್ಲಿ ಒಂದು ಗುಂಟೆ ರೆವಿನ್ಯೂ ಜಾಗವಿಲ್ಲ. ಆದುದರಿಂದ ಈ ಸ್ಥಳ ಹೊನ್ನಾವರ ಪಟ್ಟಣ ಪಂಚಾಯಿತಿಗೆ ಅವಶ್ಯಕವಿದೆ